## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.353-2020** **ಡಿ . ಡಬ್ಲುಃ 5**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಾದಮ್ಮ<br>ಮಳ್ಳರದಹುಂಡಿ ಗ್ರಾಮ, ಹೆಚ್.ಡಿ.ಕೋಟೆ ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 02-02-2025. |

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ.ಆರ್.ಎನ್ ವಕೀಲರಿಂದಃ**

ಈ ದಾವೆಯನ್ನು ಅಣ್ಣ-ತಮ್ಮಂದಿರ ಮೇಲೆ ಹೂಡಿರುತ್ತಾರೆ. ದಾವೆಯನ್ನು ಜಮೀನಿನ ವಿಚಾರವಾಗಿ ಈ ದಾವೆಯನ್ನು ಹೂಡಲಾಗಿದೆ. ದಾವಾ ಸ್ವತ್ತು ಮಳ್ಳರದಹುಂಡಿ ಗ್ರಾಮದಲ್ಲಿ ಇರುತ್ತದೆ. ಮಳ್ಳರದಹುಂಡಿ ಗ್ರಾಮವನ್ನು ಹೊರತುಪಡಿಸಿ ಮಾದನಹಳ್ಳಿಯಲ್ಲಿ ಸ್ವತ್ತು ಇರುತ್ತದೆ. ಮಾದನಹಳ್ಳಿಯಲ್ಲಿ ಇರುವ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನು ನನ್ನ ತಾಯಿಯವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ತಾಯಿ ಹೆಸರು ಪುಟ್ಟಮ್ಮ. ಸದರಿ ಸ್ವತ್ತು ನನ್ನ ತಾಯ ಪುಟ್ಟಮ್ಮ ರವರಿಗೆ ಅವರ ತವರು ಮನೆಯಿಂದ ಅರಿಶಿಣ-ಕುಂಕುಮಕ್ಕೆಂದು ನೀಡಿದ ಸ್ವತ್ತಾಗಿರುತ್ತದೆ. ನನ್ನ ತಂದೆಯವರಿಗೆ ಸೇರಿದ ಆಸ್ತಿ ಮಳ್ಳರದಹುಂಡಿ ಗ್ರಾಮದಲ್ಲಿ ಇರುತ್ತದೆ. ನನ್ನ ತಂದೆಯವರ ಮನೆ ಕಡೆಗೆ ಸೇರಿದ ಆಸ್ತಿಗಳನ್ನು ಪಾಲು-ಪಾರಿಕತ್ತಿನ ಮುಖೇನ

ವಿಭಾಗ ಮಾಡಿಕೊಳ್ಳಲಾಗಿರುತ್ತದೆ. ನಮ್ಮ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಅವರವರು ಅನುಭೋಗದಲ್ಲಿ ಇರುತ್ತಾರೆ. ನನ್ನ ತಂದೆಯವರಿಗೆ 4 ಜನ ಮಕ್ಕಳಿದ್ದು, ಅವರುಗಳ ಪೈಕಿ 2 ಜನ ಗಂಡು ಮಕ್ಕಳು, 2 ಜನ ಹೆಣ್ಣು ಮಕ್ಕಳಿದ್ದು, ನಾನೇ ಹಿರಿಯ ಮಗಳಾಗಿರುತ್ತೇನೆ. ನನ್ನನ್ನು ಮಳ್ಳರದಹುಂಡಿ ಗ್ರಾಮದಲ್ಲಿಯೇ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ತಂಗಿ ಶಿವಮ್ಮ ಅವಿವಾಹಿತೆ ಎಂದರೆ ಸರಿ. ನಿಮ್ಮ ತಮ್ಮನಾದ ಪ್ರತಿವಾದಿ ಸ್ವಾಮಿಗೌಡ ರವರು ಮೈಸೂರಿನ ಬಿ.ಇ.ಎಂ.ಎಲ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅದೇ ರೀತಿ ವಾದಿಯ ತಂದೆ ನಾಗೇಗೌಡ ಸಹ ನೀರಾವರಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಾಗೇಗೌಡ ರವರು ಮಳ್ಳರದಹುಂಡಿ ಗ್ರಾಮದಲ್ಲಿ ಇದ್ದರು ಎಂದರೆ ಸರಿ. ಪುಟ್ಟಮ್ಮ ರವರಿಗೆ ಬಂದ ಜಮೀನಿನಲ್ಲಿ ನಾಗೇಗೌಡ ರವರು ವ್ಯವಸಾಯ ಮಾಡುತ್ತಿದ್ದರು ಎಂಬ ಸಾಕ್ಷಿ ನಾವು ಇಬ್ಬರು ಸೇರಿ ವ್ಯವಸಾಯವನ್ನು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ಪುಟ್ಟಮ್ಮ ರವರಿಗೆ ತನ್ನ ತಂದೆ ಮನೆಯಿಂದ ಬಂದ ಜಮೀನನ್ನು ನಾಗೇಗೌಡ ರವರಿಗೆ ಹಕ್ಕು ಖುಲಾಸೆಯ ಮೂಲಕ ಜಮೀನನ್ನು ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪುಟ್ಟಮ್ಮ ರವರು ಮರಣ ಹೊಂದುವ ಮುಂಚೆ ನಾಗೇಗೌಡ ರವರ ಮನೆಯಲ್ಲಿಯೇ ವಾಸವಾಗಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ಎರಡೂ ಕಡೆ ಬಂದು ಹೋಗಿ

ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ನಾಗೇಗೌಡ ಮತ್ತು ಪ್ರತಿವಾದಿ ಸ್ವಾಮಿಗೌಡ ಇಬ್ಬರು ಸ್ವಾಧೀನಾನುಭದಲ್ಲಿ ಇದ್ದರು ಎಂದು ತೋರಿಸಲು ನೀವು ಯಾವುದಾದರೂ ದಾಖಲೆಯನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪಾಲು–ಪಾರಿಕತ್ತನ್ನು ಅಷ್ಟೇ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪಾಲು–ಪಾರಿಕತ್ತು ಉಪ–ನೋಂದಣಾಧಿಕಾರಗಳ ಕಚೇರಿಯಲ್ಲಿ ನೋಂದಣಿಯಾಗಿರುತ್ತದೆ ಎಂದರೆ ಸರಿ. ನನ್ನ ತಾಯಿ ಪುಟ್ಟಮ್ಮ ರವರಿಗೆ ಸೇರಿದ ಆಸ್ತಿಯು ಈಗ ಯಾರ ಹೆಸರಿನಲ್ಲಿ ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಪುಟ್ಟಮ್ಮ ರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ರಿಜಿಸ್ಟರ್ ಪತ್ರ ಇತ್ತು, ಆದರೆ ಈಗ ಅದು ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಜೀವಂತವಿದ್ದಾಗ ಸ್ವತ್ತನ್ನು ನಾಗೇಗೌಡ ರವರ ಹೆಸರಿಗೆ ಬರೆದುಕೊಟ್ಟಿರುವ ವಿಚಾರ ನಿಮಗೆ ಗೊತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ಈ ದಾವೆಯ ವಾದಿ ಮಂಜುಳ ನನ್ನ ಸೊಸೆ. ಅಂದರೆ ನನ್ನ ತಮ್ಮ ನಾಗೇಗೌಡ ರವರ ಮಗಳು. ಪುಟ್ಟಮ್ಮ ರವರು ತನ್ನ ಮಗ ನಾಗೇಗೌಡ ರವರ ಹೆಸರಿಗೆ ಬರೆದಿದ್ದ ಆಸ್ತಿಯನ್ನು ನಾಗೇಗೌಡ ರವರು ತನ್ನ ಮಗಳಾದ ವಾದಿ ಯವರ ಹೆಸರಿಗೆ ದಾನ ಪತ್ರದ ಮೂಲಕ ನೀಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಈಗ ದಾವಾ ಷೆಡ್ಯೂಲ್ ಸ್ವತ್ತು ವಾದಿ ಮಂಜುಳ ರವರ ಹೆಸರಿನಲ್ಲಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ಮಾಡಿಸಿಕೊಂಡಿರಬಹುದು ಎಂದು ನುಡಿಯುತ್ತಾರೆ. ಈಗ ಹಾಲಿ ದಾವಾ ಷೆಡ್ಯೂಲ್ ಸ್ವತ್ತು ವಾದಿ ಮಂಜುಳ ರವರ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ವಾದಿ ಮಂಜುಳ ರವರ ಹೆಸರಿಗೆ ದಾನ ಪತ್ರದ ಮುಖೇನ ಬಂದ ವಿಚಾರ ತಿಳಿದ ಬಳಿಕ ಪ್ರತಿವಾದಿಯವರು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಯವರು ವಾದಿಯವರ ಸ್ವಾಧೀನಕ್ಕೆ ತೊಂದರೆ ನೀಡುದ ಬಗ್ಗೆ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ತನ್ನ ಮೊಮ್ಮಗಳನ್ನು ತನ್ನ ಮಗನಿಗೆ ಮದುವೆ ಮಾಡಿಕೊಳ್ಳಬೇಕು ಎಂಬ ಆಸೆ ಇತ್ತು ಎಂಬ ಪ್ರಶ್ನೆಗೆ ನನಗೂ ಸಹ ಆಸೆ ಇತ್ತು ಎಂದು ನುಡಿಯುತ್ತಾರೆ. ಮಂಜುನಾಥ್ ನನ್ನ ಮಗನಾಗಿದ್ದು, ಮಂಜುಳ ನನ್ನ ಸೊಸೆ ಎಂದರೆ ಸರಿ. ನಿಮ್ಮ ಮೊಮ್ಮಗನಿಗೆ ಕಿವಿ ಕೇಳುವುದಿಲ್ಲ ಮತ್ತು ಮಾತು ಬರುವುದಿಲ್ಲ ಎಂದರೆ ಸರಿ. ಮಗು ಈ ರೀತಿ ಅಂಗವೈಕಲ್ಯದಿಂದ ಹುಟ್ಟಿದ್ದ ಕಾರಣ ತನ್ನ ಆಸ್ತಿ ತನ್ನ ಮೊಮ್ಮಗಳಿಗೆ ಸೇರಬೇಕು ಎಂಬ ಆಸೆ ಪುಟ್ಟಮ್ಮ ರವರಿಗೆ ಇತ್ತು ಎಂದರೆ ಸರಿ. ಈಗ ನನ್ನ ಮಗ ಮತ್ತು ಸೊಸೆ ಒಟ್ಟಿಗೆ ಜೀವನ ಮಾಡುತ್ತಿಲ್ಲ ಎಂದರೆ ಸರಿ. ನನ್ನ ಮಗ ನನ್ನ ಸೊಸೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಕಾರಣದಿಂದ ನನ್ನ ಸೊಸೆ ಮೈಸೂರಿನ ನ್ಯಾಯಾಲಯದಲ್ಲಿ ಜೀವನಾಂಶವನ್ನು ಕೋರಿ ಒಂದು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸದರಿ ನ್ಯಾಯಾಲಯದಲ್ಲಿ ತಿಂಗಳಿಗೆ

ರೂ.8,000/- ಜೀವನಾಂಶ ಕೊಡಬೇಕು ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ಮಗ ಮಂಜುನಾಥ್ ರವರು ತನ್ನ ಹೆಂಡತಿ ಮಂಜುಳ ರವರು ವಿರುದ್ಧ ಸಾಕ್ಷಿಯನ್ನು ನುಡಿದಿದ್ದಾರೆ ನನಗೆ ಗೊತ್ತಿಲ್ಲ.

3. ದಿ.13-07-2017 ರಂದು ಆದ ಪಾಲು ಪಾರಿಕತ್ತಿನ ಪ್ರಕಾರ ಯಾವ-ಯಾವ ಆಸ್ತಿಗಳು ಯಾರು ಯಾರಿಗೆ ಹೋಗಿದೆ ಎನ್ನುವುದು ನಿಮಗೆ ಗೊತ್ತೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತು ಎಂದು ನುಡಿಯುತ್ತಾರೆ. ಪಾಲು ಪಾರಿಕತ್ತಿನ ಪ್ರಕಾರ ತಮ್ಮ ಭಾಗಕ್ಕೆ ಬಂದ ಸ್ವತ್ತುಗಳನ್ನು ತಮ್ಮ-ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲು ಪಾರಿಕತ್ತಿನ ಪ್ರಕಾರ ನನಗೆ ಮತ್ತು ಶಿವಮ್ಮ ರವರಿಗೆ ಯಾವುದೇ ಆಸ್ತಿಗಳು ನೀಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು, ಪ್ರತಿವಾದಿ ಸ್ವಾಮಿಗೌಡ ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇಂದಿಗೂ ಸಹ ದಾವಾ ಷೆಡ್ಯೂಲ್ ಸ್ವತ್ತನ್ನು ವಾದಿ ಮಂಜುಳ ರವರೇ ಸ್ವಾಧೀನದಲ್ಲಿ ಇದ್ದು ಅವರೇ ಅನುಭವಿಸುತ್ತಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**